ಪಿ.ಡಬ್ಲ್ಯೂ-4

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 24-02-2023

ಪಾಟಿ ಸವಾಲುಃ ಶ್ರೀ. ಪಿ.ಕೆ.ಜಿ ವಕೀಲರಿಂದ

ಪ್ರತಿವಾದಿ ಕೃಷ್ಣಪ್ಪ ನನ್ನ ತಮ್ಮ ವಾದಿ ನನಗೆ ಅಣ್ಣನಾಗಬೇಕು, ವಾದಿಗೆ ಪಾಲು ಸರಿಯಾಗಿಲ್ಲ ಎಂದು ದಾವೆ ಹೂಡಿದ್ದಾರೆ ಯಾಕೆಂದರೆ ಸರಿಯಾಗಿ ಸರ್ವೆ ಮಾಡಿಲ್ಲ, ಕಿಬ್ಬೆಟ್ಟ ಗ್ರಾಮದ ಸರ್ವೆ ನಂ. 7 2 ಎಕರೆ 72 ಸೆಂಟ್ ಆಸ್ತಿ ಸಿಗಬೇಕೆಂದು ಹಾಕಿರುತ್ತಾರೆ, 1992 ರಲ್ಲಿ ನನಗೆ ವಾದಿಗೆ ಪ್ರತಿವಾದಿಗೆ ಕೈ ಬರವಣಿಗೆಯಲ್ಲಿ ಪಾಲಾಗಿತ್ತು, ಅದು ಸರಿಯಿಲ್ಲ ಎಂದು 1996 ರಲ್ಲಿ ವಾದಿ ಮತ್ತು ಹೊನ್ನಪ್ಪ ತಹಶೀಲ್ದಾರ್ ನ್ಯಾಯಾಲಯಕ್ಕೆ ಹೋಗಿರುತ್ತಾರೆ, ಅಲ್ಲಿ ಪಾಲು ಮಾಡಿರುವುದು ಸರಿಯಿಲ್ಲ ಸರಿಯಾಗಿ ಟೈಪ್ ಮಾಡಿಸಿ ತನ್ನಿ ಎಂದು ಹೇಳಿದರು, 1996 ರಲ್ಲಿ ಟೈಪ್ ಮಾಡಿಸಿ ಹೋಗಿರುತ್ತೇವೆ, 1992 ರಲ್ಲಿ ಟೈಪ್ ಮಾಡಿರುವುದು ಸರಿಯಿಲ್ಲ ಎಂದು ಅದೇ ರೀತಿ 1996 ರಲ್ಲಿ ಮತ್ತೊಂದು ಬಾರಿ ಟೈಪ್ ಮಾಡಿಸಿ ವಾದಿ ತಹಶೀಲ್ದಾರ್ ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ.

ಸದರಿ ವಿಷಯ ವಾದಿಗೆ ಗೊತ್ತಿರುತ್ತದೆ, ಕೈ ಬರವಣಿಗೆಯಲ್ಲಿ ಬರೆದ ಪತ್ರ ಪ್ರತಿವಾದಿ ಬಳಿ ಇರುತ್ತದೆ, ಅವರ ಬಳಿ ಇದೆ ಎಂದು ಹೇಳಲು ನನ್ನ ಬಳಿ ದಾಖಲೆ ಇಲ್ಲ, ಒಂದೇ ಪ್ರತಿಯನ್ನು ಟೈಪ್ ಮಾಡಲಾಗಿತ್ತು, ಸದರಿ ದಾಖಲೆಗೆ ನಾನು, ಪ್ರತಿವಾದಿ, ವಾದಿ, ಸಹಿ ಮಾಡಿರುತ್ತೇವೆ ಮಲ್ಲಪ್ಪ ಹೆಬ್ಬೆಟ್ಟು ಮಾಡಿರುತ್ತಾರೆ, ಬೇರೆ ದಾಖಲೆಗೆ ಮಲ್ಲಪ್ಪ ರವರು ಹುಷಾರಾದ ನಂತರ ಸಹಿ ಮಾಡಿರುತ್ತಾರೆ, ಸಾಕ್ಷಿಗಳು ಸುಬ್ಬಯ್ಯ, ಶಾಂತಪ್ಪ, ಜೋಯಪ್ಪ, ಕಾಳಪ್ಪ ಸಹಿ ಮಾಡಿರುತ್ತಾರೆ, 1982 ರಲ್ಲಿ ಪಾಲು ಮಾಡಿಕೊಂಡಿದ್ದು ಅದು ನೊಂದಣಿ ಆಗಿರುತ್ತದೆ, 1996 ರಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ

ಹೋಗುವುದು ಬೇಡ ನಾವೇ ಇತ್ಯರ್ಥ ಮಾಡಿಕೊಳ್ಳೋಣ ಎಂದು ಪತ್ರ ಬರೆದಿರುತ್ತಾರೆ, ನನ್ನ ತಂದೆ 1998 ರಲ್ಲಿ ಮೃತ ಪಟ್ಟಿರುತ್ತಾರೆ, 1996 ರಲ್ಲಿ ಟೈಪ್ ಮಡಿದ ಮೂಲ ಪ್ರತಿ ವಾದಿ ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ.

ನಿಪಿ 13 ಅನ್ನು 1996 ರಲ್ಲಿ ಬರೆದ ಪಾಲು ಪರಿಕತ್ತಾಗಿರುತ್ತದೆ, ಅದರಲ್ಲಿ ಪುನಃ 1996 ಟೈಪ್ ಮಾಡಲಾಗಿದೆ ಎಂದು ಬರೆದಿರುವುದಿಲ್ಲ, ಅದರ ನಕಲು ನನ್ನ ಬಳಿ ಇರುತ್ತದೆ, 1992 ರ ಪಾಲುಪರಿಕತ್ತಿನಂತೆ 1996 ರಲ್ಲಿ ಪುನಃ ಟೈಪ್ ಮಾಡಲಾಗಿದೆ ಎಂದು ನಿಪಿ 13 ರಲ್ಲಿ ಬರೆಯಲು ತೊಂದರೆ ಇರಲಿಲ್ಲ, ಕೃಷ್ಣಪ್ಪ ಕನ್ನಡದಲ್ಲಿ ಸಹಿ ಮಾಡುತ್ತಾರೆ ಅವರು ಆಂಗ್ಲ ಭಾಷೆಯಲ್ಲೂ ಸಹಿ ಮಾಡುತ್ತಾರೆ, ನಿಪಿ 13 ರಲ್ಲಿರ ಮೊದಲ ಪುಟದಲ್ಲಿ ಕೃಷ್ಣಪ್ಪ ಎಂಬುವವರ ಹೆಸರಿನ ಮುಂದೆ ಏನೋ ಒಂದು ಗೀದ ಹಾಗೆ ಬರೆದಿರುತ್ತಾರೆ, 3 ನೇ ಪುಟದಲ್ಲಿ 2 ಸಲ ಗೀಚಿರುತ್ತಾರೆ, ನನ್ನ ಹತ್ತಿರು ಇರುವ ಜೆರಾಕ್ಸ್ ಪ್ರತಿಯಲ್ಲಿ ನ್ಯಾಯಾಲಯದ ಮುಂದೆ ಇರುವ ದಾಖಲೆ ರೀತಿ ಇಲ್ಲ, 4 ನೇ ಪುಟದಲ್ಲಿ ಅದೇ ರತೀ ಗೀಚಿರುತ್ತಾರೆ, 5, 6 ನೇ ಪುಟದಲ್ಲಿ ಗೀಚುವ ಬದಲು ಎಸ್,ಎಂ. ಎಂದು ಸಹಿ ಮಾಡಿದ್ದಾರೆ ಎಂದರೆ ಸರಿ.

ನಿಪಿ 13 ರಲ್ಲಿರುವ ಕೃಷ್ಣಪ್ಪ ರವರ ಹೆಸರಿನ ಮುಂದೆ ಗೀಚಿರುವುದನ್ನು ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ ಅದನ್ನು ವಾದಿಯೇ ಮಾಡಿರಬಹುದು ಎಂದರೆ ನನಗೆ ಗೊತ್ತಿಲ್ಲ, ಮಲ್ಲಪ್ಪ ಎಂದು ನಮೂದು ಮಾಡಿರುವ ಅಕ್ಷರವನ್ನು ವಾದಿಯೇ ಬರೆದಿರುತಾತರೆ, ಅವರಿಗೆ ಹೆಬ್ಬೆಟ್ಟು ಹಾಕಲು ಅನಾರೋಗ್ಯ ಆದ ಕಾರಣ ಬರೆದಿರುತ್ತಾರೆ ಆ ನಂತರದಲ್ಲಿ ಸಹಿ ಮಾಡಿರುತ್ತಾರೆ, 1982 ರಲ್ಲಿ ಪಾಲಾದ

ನೊಂದಣಿ ದಾಖಲೆಯಲ್ಲಿ ನನ್ನ ತಂದೆ ಹೆಬ್ಬೆಟ್ಟು ಮತ್ತು ಸಹಿಯನ್ನು ಹಾಕಿರುತ್ತಾರೆ, ನನ್ನ ತಂದೆ ನಿಪಿ 13 ನ್ನು ಬಿಟ್ಟು ಬೇರೆ ಎಲ್ಲಾ ದಾಖಲೆಯಲ್ಲೂ ಸಹಿ ಮಾಡಿದ್ದಾರೆ ಎಂದರೆ ಸರಿ, ಹುಷಾರಿಲ್ಲದ ಕಾರಣ ನಿಪಿ 13 ಕ್ಕೆ ಹೆಬ್ಬೆಟ್ಟನ್ನು ಹಾಕಿರುತ್ತಾರೆ. ನಿಪಿ 13 ತಯಾರು ಮಾಡುವಾಗ ಸಹಿಯನ್ನು ಬಿಟ್ಟು ಹೆಬ್ಬೆಟ್ಟನ್ನು ನನ್ನ ತಂದೆ ಅವರ ಆರೋಗ್ಯ ಸರಿಯಿಲ್ಲದ ಕಾರಣ ಮಾಡಿರುತ್ತಾರೆ ಎಂದರೆ ಸರಿ ಆ ನಂತರ ಅವರು ಹುಷಾರಾಗಿರುತ್ತಾರೆ.

ಅದರಲ್ಲಿ ನನ್ನ ತಂದೆ ಯಾವಾಗಲೂ ಸಹಿ ಮಾಡುತ್ತಿದ್ದು ಅನಾರೋಗ್ಯದ ಕಾರಣ ಹೆಬ್ಬೆಟ್ಟು ಹಾಕಿದ್ದಾರೆ ಎಂದು ಬರೆಯಲು ಯಾರಿಗಾದರೂ ತೊಂದರೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ, ನಿಪಿ 13 ನ್ನು ನಾನು, ವಾದಿ ಸೇರಿಕೊಂಡು ಪ್ರತಿವಾದಿಗೆ ಮೋಸ ಮಾಡಲು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ಆದ ಕಾರಣ ನನ್ನ ತಂದೆ ಒಪ್ಪಿಗೆ ಸಹ ಇರಲಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆ ಸಹಿ ಬೇಕಾದ ಕಾರಣ ಅವರ ತರಹ ಸಹಿ ಮಾಡಲು ಆಗದ ಕಾರಣ ನಾವು ಯಾರೋ ಹೆಬ್ಬೆಟ್ಟನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ, ಅದರಲ್ಲಿರುವ ಯಾವ ಹೆಬ್ಬೆಟು ಸಹ ನನ್ನ ತಂದೆಯದಲ್ಲ ಎಂದರೆ ಸರಿಯಲ್ಲ, ಪ್ರತಿವಾದಿ ನಿಪಿ 13 ಕ್ಕೆ ಸಹಿ ಮಾಡಿಲ್ಲ ನಾನು ಮತ್ತು ವಾದಿ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ಆ ಕಾರಣಕ್ಕಾಗಿ ಒಂದೊಂದು ಪುಟದಲ್ಲಿ ಒಂದೊಂದು ರೀತಿ ಸಹಿ ಇದೆ ಎಂದರೆ ಸರಿಯಲ್ಲ.

1992 ರಲ್ಲಿ ಹೇಗೆ ಬರೆದಿದ್ದಾರೋ ಅದನ್ನೇ ನಿಪಿ 13 ರಲ್ಲಿ ಬರೆದಿರುತ್ತೇವೆ, ನನಗೆ ಕನ್ನಡ ಓದಲು ಬರುತ್ತದೆ, ನಿಪಿ 13 ರ 4 ನೇ ಪ್ಯಾರಾದಲ್ಲಿ ಈ ರೀತಿ ನಮೂದು ಇರುತ್ತದೆ ಎಸ್.ಎಂ.ಚಂದ್ರಪ್ಪ ರವರ ಪಾಲಿನ ಸ್ವತ್ತುಗಳು ಸೋಮವಾರಪೇಟೆ ತಾಲ್ಲೂಕು ಕಚೇರಿ ಕೇಸ್ ನಂ. ಎಂ.ಸಿ ತಕರಾರು -

23/1995-96 ದಿಃ 21-11-1995 ರಂತೆ ಸದರಿ ಚಂದ್ರಪ್ಪ ರವರು ವರ್ಗಾಯಿಸಿಕೊಂಡಿರುತ್ತಾರೆ ಮತ್ತು ಅವರು ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. 1992 ರಲ್ಲಿ ಬಂದ ಪಾಲಿಗೆ ಅದರಲ್ಲಿ ನಮಗೆ ಜಾಸ್ತಿ ಆಸ್ತಿ ಮತ್ತು ನಮಗೆ ಅನುಕೂಲವಾಗುವ ಆಸ್ತಿಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ನಿಪಿ 13 ರ ಆದಾರದ ಮೇಲೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 33/2023 ರಂತೆ ದಾವೆ ಹಾಕಿದ್ದೇವೆ ಎಂದರೆ ಸರಿ, ಅದರಲಿಲ 1992 ರಲ್ಲಿ ಹಂಚಿಕೆಯಾದ ಸರ್ವೆ ನಂ. 6 ರ ಜಾಗ ನಾನು ಸ್ವಾದೀನದಲ್ಲಿದೇನೆ ನನಗೆ ತೊಂದರೆ ಮಾಡುತ್ತಿದ್ದಾರೆ ಎಂದು ನನಗೆ ಆ ಜಾಗದ ಮಾಲೀಕ ಎಂದು ಘೋಷಣೆ ಮಾಡಿ ಮತ್ತು ಅಕ್ರಮ ಪ್ರವೇಶ ಮಾಡಬಾರದು ಎಂದು ದಾವೆ ಹೂಡಿದ್ದೇನೆ ಎಂದರೆ ಸರಿ.

ಅಸಲು ದಾವಾ ನಂ. 60/2022 ರಲ್ಲಿ ಸರ್ವೆ ನಂ. 77/45 ರಲ್ಲಿ 1 ಎಕರೆ 20 ಸೆಂಟ್, ಸುಳಿಮತ್ತೆ ಗ್ರಾಮದ ಸರ್ವೆ ನಂ. 1/26 ರಲ್ಲಿ 20 ಸೆಂಟ್ ಜಾಗವನ್ನು 1992 ರಲ್ಲಿ ನನ್ನ ತಂದೆಗೆ ಕೊಟ್ಟ ಹಾಗೆ ಸೃಷ್ಟಿ ಮಾಡಿ ವಿಲ್ ಅನ್ನು ಸೃಷ್ಟಿ ಮಾಡಿ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ, ನಾನು ಹಾಕಿರುವ 2 ದಾವೆಯನ್ನು ಪ್ರತಿವಾದಿಗೆ ಮೋಸ ಮಾಡಲು ಹಾಕಿರುತ್ತೇನೆ ಎಂದರೆ ಸರಿಯಲ್ಲ, 1996 ರಲ್ಲಿ ಮಾಡಿದ ಪತ್ರಕ್ಕೆ 1992 ರಲ್ಲಿ ಸಹಿ ಮಾಡಿದ ಸಾಕ್ಷಿಗಳೇ ಮಾಡಿದ್ದಾರೆ, 1992 ರಲ್ಲಿ ಆದ ಪತ್ರದ ನಕಲನ್ನು ನನ್ನ ಮತ್ತು ವಾದಿಯ ಮದ್ಯೆ ಇಲ್ಲ, ದಿಃ 05-03-1992 ರಲ್ಲಿ ಪಾಲಾಗಿಲ್ಲ ಎಂದರೆ ಸರಿಯಲ್ಲ, ಟೈಪ್ ಮಾಡಿದ ಪಾಲುಪರಿಕತ್ತಿನಲ್ಲಿ ನನ್ನ ಮತ್ತು ವಾದಿಯ ಸಹಿ ಬಿಟ್ಟು ಬೇರೆ ಎಲ್ಲರ ಸಹಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, 1982 ರಲ್ಲಿ ಆದ ಪಾಲುಪರಿಕತ್ತಿನ ಮೂಲ ಪ್ರತಿ ಹಾಳಾಗಿರುತ್ತದೆ, ನಿಪಿ 1 ದಿಃ 22-05-1982 ನೇ ಇಸವಿಯಲ್ಲಿ ಆಗಿರುವ ನೊಂದಾಯಿತ ವಿಭಾಗ ಪತ್ರದಲ್ಲಿ ಐಟಂ ನಂ. 9

ಕಿಬೆಟ್ಟ ಗ್ರಾಮದ ಸರ್ವೆ ನಂ. 7 ರ ವಿಸ್ತೀರ್ಣ 1.63 ಎಕರೆ ಮಲ್ಲಪ್ಪ, ಚಂದ್ರಪ್ಪ, ಕೃಷ್ಣಪ್ಪ, ಪುಟ್ಟಸ್ವಾಮಿ ರವರಿಗೆ ಹಂಚಿಕೆಯಾಗಿದೆ ಎಂದರೆ ಸರಿ. 1992 ರಲ್ಲಿ ಪಾಲು ಮಾಡುವಾಗ 2 ಎಕರೆ 72 ಸೆಂಟ್ ಜಾಗವನ್ನು ನೀಡಲು ನನ್ನ ತಂದೆಗೆ ಆಸ್ತಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ, ನಾನು ಮತ್ತು ಪುಟ್ಟಸ್ವಾಮಿ ಸೇರಿಕೊಂಡು ಪ್ರತಿವಾದಿಗೆ ಮೋಸ ಮಾಡಿದ್ದು ಅದನ್ನು ರಕ್ಷಣೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

Sd/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ